ಕನಕ ಹತ್ತಿ ಬೆಳೆ

106(62); ಶ್ರೀ ಪುಟ್ಟಣ್ಣಯ್ಯ ಕೆ.ಎಸ್.

ಅ) ರಾಜ್ಯದ ಒಂಬತ್ತು ಜಿಲ್ಲೆಗಳಲ್ಲಿ ಕನಕ ಹತ್ತಿ ಬೆಳೆಯನ್ನು ಬೆಳೆಯುತ್ತಿದ್ದು, ಎಷ್ಟು ಎಕರೆ ಪ್ರದೇಶದಲ್ಲಿ ಈ ಕನಕ ಹತ್ತಿ ಬೆಳೆ ನಷ್ಟವಾಗಿದೆ:

ಆ) ಈ ಬೀಜ ಬಿತ್ತನೆಯಿಂದ ರೈತರಿಗಾಗಿರುವ ನಷ್ಟ ಎಷ್ಟು;

ಇ) ನಷ್ಟ ಹೊಂದಿದ ರೈತರಿಗೆ ಎಕರೆಗೆ ಎಷ್ಟು ಪರಿಹಾರವನ್ನು ನೀಡಲಾಗಿದೆ: ಸದರಿ ಪರಿಹಾರವನ್ನು ಕಂಪನಿಗಳಿಂದ ಕೊಡಿಸಲಾಗಿದೆಯೇ; ಅಥವಾ ಸರ್ಕಾರದಿಂದ ಕೊಡಲಾಗಿದೆಯೇ:

ಈ) ಇದುವರೆವಿಗೆ ಸರ್ಕಾರ ಈ ಬೀಜದ ಕಂಪನಿಯ ಮೇಲೆ ಕೈಗೊಂಡ ಕ್ರಮವೇನು?

ಶ್ರೀ ಕೃಷ್ಣ ಭೈರೇಗೌಡ (ಕೃಷಿ ರಾಜ್ಯ ಸಚಿವರು)

ಅ) ರಾಜ್ಯದ ಏಳು ಜಿಲ್ಲೆಗಳಲ್ಲಿ ಅಂದರೆ, ಚಿತ್ರದುರ್ಗ, ದಾವಣಗೆರೆ, ಹಾವೇರಿ, ಬೆಳಗಾವಿ, ಧಾರವಾಡ, ಗದಗ್ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಅಂದಾಜು 55,147 ಹೆಕ್ಟೇರ್ ಪ್ರದೇಶದಲ್ಲಿ ಬಿಟಿ ಹತ್ತಿ ಕನಕ ತಳಿಯ ಬೆಳೆ ಹಾನಿಯಾಗಿರುವ ಬಗ್ಗೆ ಜಂಟಿ ಸಮೀಕ್ಷೆ ತಂಡದ ಕ್ಷೇತ್ರ ಸಮೀಕ್ಷೆಯಿಂದ ವರದಿಯಾಗಿರುತ್ತದೆ.

ಆ) ಅಂದಾಜು 55,147 ಹೆಕ್ಟೇರ್ ಪ್ರದೇಶದಲ್ಲಿ ಶೇ.50ಕ್ಕಿಂತ ಮೇಲ್ಪಟ್ಟು ಇಳುವರಿಯಲ್ಲಿ ನಷ್ಟವಾಗಿರುತ್ತದೆಂದು ಜಂಟಿ ಸಮೀಕ್ಷೆ ತಂಡದ ಕ್ಷೇತ್ರ ಸಮೀಕ್ಷೆಯಿಂದ ವರದಿಯಾಗಿರುತ್ತದೆ.

ಇ) ಬೆಳೆ ನಷ್ಟಹೊಂದಿದ ರೈತರುಗಳಿಗೆ ಸಂಬಂಧಿಸಿದ ಸಂಸ್ಥೆಯಿಂದ ಹಾಗೂ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ (NDRF) ಯಡಿ NDRF ಮಾರ್ಗಸೂಚಿ ಯನ್ವಯ ಪ್ರತಿ ಹೆಕ್ಟೇರ್‌ಗೆ ₹ 4500.00ರಂತೆ ಪರಿಹಾರವನ್ನು ವಿತರಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

ಈ) ಜಂಟಿ ಸಮೀಕ್ಷಾ ತಂಡಗಳಿಂದ ಶೇ.50ಕ್ಕಿಂತ ಮೇಲ್ಪಟ್ಟು ಇಳುವರಿಯಲ್ಲಿ ನಷ್ಟವಾಗಿರುವ ಪ್ರದೇಶವನ್ನು ಗುರುತಿಸಲಾಗಿದ್ದು, ಬೆಳೆ ನಷ್ಟಹೊಂದಿದ ರೈತರುಗಳಿಗೆ ಸಂಬಂಧಿಸಿದ ಸಂಸ್ಥೆಯಿಂದ ಸೂಕ್ತ ಪರಿಹಾರ ನೀಡಲು ಕ್ರಮವಹಿಸಿದೆ. ಹಾಗೂ ಮಹಿಕೊ ಸಂಸ್ಥೆಯ ಬಿಟಿ ಹತ್ತಿ ತಳಿ ಕನಕ ಬೀಜ ಮಾದರಿಗಳ ತಳಿ ಶುದ್ಧತೆ ಪರೀಕ್ಷೆ ನಡೆಸಲು ಕೃಷಿ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ಕ್ರಮ ಕೈಗೊಳ್ಳಲಾಗಿದ್ದು, ಪರೀಕ್ಷೆಯಲ್ಲಿ ಬೀಜ ದೋಷ ಸಾಬೀತಾದಲ್ಲಿ ಬೀಜ ಕಾಯ್ದೆ, 1966, ಬೀಜ ನಿಯಮಾವಳಿ, 1968 ಮತ್ತು ಬೀಜ ನಿಯಂತ್ರಣ ಆದೇಶ, 1983 ಗಳನ್ವಯ ಕಂಪನಿಯ ಮೇಲೆ ಕ್ರಮ ಕೈಗೊಳ್ಳಲಾಗುವುದು.

ವಿದ್ಯುತ್ ತಾರತಮ್ಯ ವಿರೋಧಿಸಿ ಚಳುವಳಿ

107(63); ಶ್ರೀ ಪುಟ್ಟಣ್ಣಯ್ಯ ಕೆ.ಎಸ್. (ಮೇಲುಕೋಟೆ)

ಅ) ರಾಜ್ಯದಲ್ಲಿ ನಗರ ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶದ ವಿದ್ಯುತ್ ತಾರತಮ್ಯವನ್ನು ವಿರೋಧಿಸಿ ಚಳುವಳಿ ಮಾಡಿದ ಎಷ್ಟು ಜಿಲ್ಲೆಯ ರೈತರ ಮೇಲೆ ಮೊಕದ್ದಮೆಗಳನ್ನು ಹೂಡಲಾಗಿದೆ;

ಆ) ಸದರಿ ಚಳುವಳಿಯ ಸಂದರ್ಭದಲ್ಲಿ ಎಷ್ಟು ಜಿಲ್ಲೆಗಳ ರೈತರು ಮನೆಯ ಮೀಟರ್‌ಗಳನ್ನು ಸರ್ಕಾರಕ್ಕೆ ವಾಪಸ್‌ಕೊಟ್ಟಿರುತ್ತಾರೆ;

ಇ) ಈ ಅವಧಿಯ ಬಾಕಿ ಇರುವ ಬಿಲ್ಲನ್ನು ಮನ್ನಾ ಮಾಡಿ ಹೋರಾಟ ಮಾಡಿದ ರೈತರ ಮೇಲೆ ಹೂಡಿರುವ ಮೊಕದ್ದಮೆಗಳನ್ನು ವಾಪಸ್ ಪಡೆದುಕೊಳ್ಳಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ರಾಜ್ಯದಲ್ಲಿ ನಗರ ಪ್ರದೇಶ ಮತ್ತು ಗ್ರಾಮಾಂತರ ಪ್ರದೇಶದ ವಿದ್ಯುತ್ ತಾರತಮ್ಯವನ್ನು ವಿರೋಧಿಸಿ ಚಳುವಳಿ ಮಾಡಿದ ಜಿಲ್ಲೆಯ ರೈತರ ಮೇಲೆ ವಿದ್ಯುತ್ ಸರಬರಾಜು ಕಂಪನಿಗಳು ಯಾವುದೇ ಮೊಕದ್ದಮೆಗಳನ್ನು ಹೂಡಿರುವುದಿಲ್ಲ.